SC:66/2024
PW:11 CW:15

ಕರ್ನಾಟಕ ಸರ್ಕಾರ (ಸಿ.ಆರ್.ಪಿ67)

| |
|---|
| ಹೇಳಿಕೆ ಹಾಳೆ |
| ಆರ್.ಪಿ. ಸಂಖ್ಯೆ57 |
| ನಮೂನೆ ಸಂಖ್ಯೆ4 |
| (ಸಿವಿಲ್) |

## 3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಬಳ್ಳಾಪುರ

## ಸತ್ರ ಪ್ರಕರಣ ಸಂಖ್ಯೆ: 66/2024

| | |
|---|---|
| PW | 11 |
| CW | 15 |

**ಸಾಕ್ಷಿಯನ್ನು ಕರೆಯಿಸಿ ಸತ್ಯ ಬೋಧನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ** 23.07.2026.

| | | |
|---|---|---|
| ಸಾಕ್ಷಿಯ ಹೆಸರು | : | ಭಾರತಿ ಎಸ್ ಸಿ |
| ತಂದೆಯ ಹೆಸರು | : | ಚಿಕ್ಕ ರೇವಣ್ಣ |
| ವಯಸ್ಸು | : | 52 ವರ್ಷ |
| ಉದ್ಯೋಗ | : | ಪಿ ಎಸ್ ಐ, ತುಮಕೂರು ಗ್ರಾಮಾಂತರ ಪೋಲಿಸ್ ಠಾಣೆ |
| ವಾಸಸ್ಥಳ | : | ತುಮಕೂರು |

**ಮುಖ್ಯ ವಿಚಾರಣೆ: ಸರ್ಕಾರಿ ಅಭಿಯೋಜಕರಿಂದ:**

ನಾನು ದಿ: 01.02.2024 ರಿಂದ 30.05.2024 ರವರೆಗೆ ಗೌರಿಬಿದನೂರು ನಗರ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ.ಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ .

2. ದಿನಾಂಕ 01.03.2024 ರಂದು ಚಾಸಾ.1 ರವರು ನೀಡಿದ ದೂರನ್ನು ಪಡೆದು ಠಾಣಾ ಮೊಕದ್ದಮೆ ಸಂಖ್ಯೆ 35/2024 ರಲ್ಲಿ ಭಾರತ ದಂಡ ಸಂಹಿತೆ 399 ಮತ್ತು 402 ರಡಿಯಲ್ಲಿ ಪ್ರಕರಣವನ್ನು ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ನ್ಯಾಯಲಯಕ್ಕೆ ಕಳುಹಿಸಿರುತ್ತೇನೆ. ದೂರನ್ನು ನೋಡುತ್ತಿದ್ದು ಈಗಾಗಲೇ ನಿಪಿ.1 ಎಂದು

ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ.1(ಬಿ) ಎಂದು ಗುರುತಿಸಲಾಯಿತು. ಪ್ರಥಮ ವರ್ತಮಾನ ವರದಿಯನ್ನು ನೋಡುತ್ತಿದ್ದು ಅದನ್ನು ನಿಪಿ.15 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ.15(ಎ) ಎಂದು ಗುರುತಿಸಲಾಯಿತು.

3. ಅದೇ ದಿನ ಸಾಕ್ಷಿದಾರರಾದ ಚಾಸಾ.2 ಮತ್ತು 3 ರವರನ್ನು ಠಾಣೆಗೆ ಬರಮಾಡಿಕೊಂಡು ಪಂಚರಾಗಿ ಸಹಕರಿಸಬೇಕೆಂದು ಕೋರಿಕೊಂಡು ಅವರಿಗೆ ನೋಟೀಸ್ ಗಳನ್ನು ಜಾರಿ ಮಾಡಿರುತ್ತೇನೆ ಮತ್ತು ಸಿಬ್ಬಂಧಿಗಳಾದ ಚಾಸಾ. 13 ಮತ್ತು 14 ಮತ್ತು ವಿನಯ್ ರವರಿಗೆ ಮತ್ತು ಜೀಪ್ ಡ್ರೈವರ್ ಎ.ಪಿ.ಸಿ ಹರೀಶ್ ರವರೊಂದಿಗೆ ಸ್ಥಳಕ್ಕೆ ಹೋಗಿ ಅಲ್ಲಿ ಚಾಸಾ. 11 ಮತ್ತು 12 ರವರು ಅಲ್ಲಿ ಇದ್ದು, ಮತ್ತು ಮೂರು ಜನ ಆರೋಪಿಗಳನ್ನು ಹಿಡಿದುಕೊಂಡು ನಿಂತಿದ್ದರು ನಂತರ ನಾನು ಅಲ್ಲಿ ಸ್ಥಳ ಪರಿಶೀಲನೆ ಮಾಡಿ ಆರೋಪಿತರಿಂದ ಲಾಂಗ್, ಮಚ್ಚು, ಚಾಕು, ಮತ್ತು ದೊಣ್ಣೆ ಇವುಗಳನ್ನು ಪಂಚನಾಮೆ ಮಾಡಿ ಅಮಾನತ್ತು ಪಡಿಸಿಕೊಂಡಿರುತ್ತೇನೆ ಪಂಚನಾಮೆಯನ್ನು 2.15 ರಿಂದ 3.15 ರವರಿಗೆ ಜರುಗಿಸಿರುತ್ತೇನೆ. ಸದರಿ ಪಂಚನಾಮೆಯನ್ನು ನೋಡುತ್ತಿದ್ದು ಇದನ್ನು ಈಗಾಗಲೇ ನಿಪಿ.2 ಎಂದು ಗುರುತಿಸಲಾಗಿದ್ದು. ಸಾಕ್ಷಿಯ ಸಹಿಯನ್ನು ನಿಪಿ.2(ಸಿ) ಎಂದು ಗುರುತಿಸಲಾಯಿತು. ಪಂಚನಾಮೆಯ ಕಾಲಕ್ಕೆ ಫೋಟೊ ತಗೆಯಲಾಗಿರುತ್ತದೆ.

4. ನಾನು ಸ್ಥಳದಲ್ಲಿ ಹಿಡಿದಂತಹ ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ ಈ ದಿನ ನ್ಯಾಯಾಲಯದ ಮುಂದೆ 3 ನೇ ಆರೋಪಿ ಹಾಜರಿರುತ್ತಾನೆಂದು ಗುರುತಿಸಿದ್ದು ಮತ್ತು ವಿ ಸಿ ಮೂಲಕ ಹಾಜರಿರುವ 2 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. 1 ನೇ ಆರೋಪಿ ಗೈರು ಹಾಜರಿದ್ದು ಅವರ ಪರ ವಕೀಲರು ಅರ್ಜಿಯನ್ನು ಸಲ್ಲಿಸಿ ಗುರುತಿಸುವಿಕೆಯ ಬಗ್ಗೆ ತಕರಾರು ಇಲ್ಲ ಎಂದು ವಕೀಲರು ಹೇಳಿದ ಕಾರಣ ಗೈರು ಹಾಜರಾತಿಯನ್ನು ಪುರಸ್ಕರಿಸಲಾಯಿತು.

5. ನಾನು ಸ್ಥಳದಲ್ಲಿ ಅಮಾನತ್ತು ಪಡಿಸಿಕೊಡಂತಹ ವಸ್ತುಗಳಾದ ಒಂದು ಕಬ್ಬಿಣದ ರಾಡು, ಒಂದು ಕಬ್ಬಿಣದ ಮಚ್ಚು, ಒಂದು ಚಾಕು, ಮತ್ತು ಒಂದು ಕಬ್ಬಿಣದ ರಾಡು ಮತ್ತು

ಒಂದು ದೊಣ್ಣೆಯನ್ನು ನೋಡುತ್ತಿದ್ದು ಅವುಗಳನ್ನು ಈಗಾಗಲೇ ಮುಮಾ.1 ರಿಂದ 5 ಎಂದು ಗುರುತಿಸಲಾಗಿದೆ. ನಂತರ ಆರೋಪಿತರನ್ನು ಮತ್ತು ಮುಮಾಗಳನ್ನು ಠಾಣೆಗೆ ಕರೆದುಕೊಂಡು ಬಂದು ಮುಮಾಗಳನ್ನು ಪಿ.ಎಫ್ ನಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ಕಳುಹಿಸಿರುತ್ತೇನೆ. ನಂತರ 1 ರಿಂದ 3 ನೇ ಆರೋಪಿತರ ಸ್ವಇಚ್ಚೆ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಆರೋಪಿತರು ತಮ್ಮ ಸ್ವಇಚ್ಛಾ ಹೇಳಿಕೆಗಳಲ್ಲಿ ಈ ಹಿಂದೆ ಗೌರಿಬಿದನೂರು ನಗರ ಠಾಣೆಯ ಕ್ರಂ.ನಂ.239/2022 ರಲ್ಲಿ 45/2023 ರಲ್ಲಿ ಭಾರತ ದಂಡ ಸಂಹಿತೆ ಕಲಂ 392 ರಡಿಯಲ್ಲಿ ದಾಖಲಾದ ಪ್ರಕರಣಗಳಲ್ಲಿ ಆರೋಪಿತರು ಇರುವುದಾಗಿ ತಿಳಿಸಿರುತ್ತಾರೆ. 1 ನೇ ಆರೋಪಿ ತನ್ನ ಸ್ವಇಚ್ಚೆ ಹೇಳಿಕೆಯಲ್ಲಿ "ನನ್ನನ್ನು ಕರೆದುಕೊಂಡು ಹೋದರೆ ನಾನು ಸರಗಳನ್ನು ಕಿತ್ತುಕೊಂಡು ಹೋದ ಸ್ಥಳಗಳನ್ನು ಮತ್ತು ಒಡವೆಗಳನ್ನು ಮಾರಾಟ ಮಾಡಿರುವ ಅಂಗಡಿಗಳನ್ನು ತೋರಿಸಿರುತ್ತೇನೆ " ಎಂದು ತಪ್ಪೊಪ್ಪಿಗೆ ನೀಡಿರುತ್ತಾನೆ . ಸದರಿ ಹೇಳಿಕೆಯ ಭಾಗವನ್ನು ನಿಪಿ.16 ಎಂದು ಗುರುತಿಸಲಾಯಿತು ಆರೋಪಿಯ ಸಹಿಯನ್ನು ನಿಪಿ.16(ಎ) ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ.16(ಬಿ) ಎಂದು ಗುರುತಿಸಲಾಯಿತು.

6. 2 ನೇ ಆರೋಪಿ ತನ್ನ ಸ್ವಇಚ್ಚೆ ಹೇಳಿಕೆಯಲ್ಲಿ " ನನ್ನನ್ನು ಕರೆದುಕೊಂಡು ಹೋದರೆ ನಾವು ಸರಗಳನ್ನು ಕಿತ್ತುಕೊಂಡು ಹೋಗಿರುವ ಸ್ಥಳಗಳನ್ನು ಮತ್ತು ಬಂಗಾರದ ಒಡವೆಗಳನ್ನು ಮಾರಾಟ ಮಾಡಿರುವ ಅಂಗಡಿಯನ್ನು ತೋರಿಸಿರುತ್ತೇನೆ " ಎಂದು ತಪ್ಪೊಪ್ಪಿಗೆ ನೀಡಿರುತ್ತಾನೆ . ಸದರಿ ಹೇಳಿಕೆಯ ಭಾಗವನ್ನು ನಿಪಿ.17 ಎಂದು ಗುರುತಿಸಲಾಯಿತು. ಆರೋಪಿಯ ಸಹಿಯನ್ನು ನಿಪಿ.17(ಎ) ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ.17(ಬಿ) ಎಂದು ಗುರುತಿಸಲಾಯಿತು. ನಂತರ ಸದರಿ ಪ್ರಕರಣಗಳಲ್ಲಿನ ಮಾಲುಗಳನ್ನು ವಶಪಡಿಸಿಕೊಳ್ಳುವುದಕೊಸ್ಕರ ಆರೋಪಿತರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ ನ್ಯಾಯಾಲಯದ ಆದೇಶದ ಮೇರೆಗೆ ದಿಃ 01.03.2024 ರಿಂದ 04.03.2024 ರವರೆಗೆ ಪೋಲಿಸ್ ಅಭಿರಕ್ಷೆಗೆ ತನಿಖೆಗಾಗಿ ಪಡೆದುಕೊಂಡಿರುತ್ತೇನೆ.

7. 3 ನೇ ಆರೋಪಿಯು ತನ್ನ ಸ್ವಇಚ್ಛಾ ಹೇಳಿಕೆಗಳಿಗೆ ಸಹಿ ಮಾಡಿದ್ದು ಅದನ್ನು ನೋಡುತ್ತಿದ್ದು 3 ನೇ ಆರೋಪಿಯ ಸಹಿಯನ್ನು ನಿಪಿ.18 ಎಂದು , ಸಾಕ್ಷಿಯ ಸಹಿಯನ್ನು ನಿಪಿ.18 (ಎ) ಎಂದು ಗುರುತಿಸಲಾಯಿತು. 3 ನೇ ಆರೋಪಿಯು ತನ್ನಸ್ವಇಚ್ಛಾ ಹೇಳಿಕೆಗಳಲ್ಲಿ ತನ್ನ ತಪ್ಪನ್ನು ಒಪ್ಪಿಕೊಂಡಿರುತ್ತಾನೆ .

8. ನಂತರ ಅದೇ ದಿನ ಆರೋಪಿತರು ಕೃತ್ಯಕ್ಕೆ ಬಳಸಿದ ದ್ವಿ ಚಕ್ರ ವಾಹನವಾದ ಕೆ.ಎ.02 ಹೆಚ್.ವೈ 8208 ನೇದ್ದನ್ನು ವಶ ಪಡಿಸಿಕೊಳ್ಳಲು ಪಂಚರಾದ ಚಾಸಾ. 4 ಮತ್ತು 5 ರವರನ್ನು ಠಾಣೆಗೆ ಬರಮಾಡಿಕೊಂಡು ಅವರಿಗೆ ನೋಟೀಸ್ ಗಳನ್ನು ಜಾರಿ ಮಾಡಿ ಪಂಚರು ಮತ್ತು ಆರೋಪಿಗಳೊಂದಿಗೆ ಗೌರಿಬಿದನೂರು ವಿನಾಯಕ ನಗರದ ರಾಜು ರವರ ಮನೆ ಮುಂದೆ ನಿಲ್ಲಿಸಿದ ಸದರಿ ವಾಹನವನ್ನು ಅಮಾನತ್ತು ಪಂಚನಾಮೆಯ ಮೂಲಕ ವಶಕ್ಕೆ ತಗೆದುಕೊಂಡಿರುತ್ತೇನೆ. ಸದರಿ ಪಂಚನಾಮೆಯನ್ನು ಸಂಜೆ 5.30 ರಿಂದ 6.15 ರವರೆಗೆ ಜರುಗಿಸಲಾಗಿರುತ್ತದೆ. ಸದರಿ ಪಂಚನಾಮೆಯನ್ನು ನೋಡುತ್ತಿದ್ದು ಈಗಾಗಲೇ ನಿಪಿ.5 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿ.5(ಸಿ) ಎಂದು ಗುರುತಿಸಲಾಯಿತು. ಅಮಾನತ್ತು ಪಡಿಸಿಕೊಡಂತಹ ದ್ವಿಚಕ್ರವಾಹನವನ್ನು ನೋಡಿದರೆ ಗುರುತಿಸುತ್ತೇನೆ.

9. ಅದೇ ದಿನ ಪೋಲಿಸರ ಬೆಂಗಾವಲಿನಲ್ಲಿ ಆರೋಪಿತರನ್ನು ಇಟ್ಟಿದ್ದು ನಂತರ ದಿನಾಂಕ 02.03.2024 ರಂದು ಆರೋಪಿತರನ್ನು ಕುಲಂಕುಷವಾಗಿ ವಿಚಾರಣೆ ಮಾಡಿದಾಗ, ಆರೋಪಿತರು ಗೌರಿಬಿದನೂರು ಗ್ರಾಮಾಂತರ ಪೋಲಿಸ್ ಠಾಣೆಯ ಮೊಕದ್ದಮೆ ಸಂಖ್ಯೆ 125/2025 ಭಾರತ ದಂಡ ಸಂಹಿತೆ ಕಲಂ 392 ರಡಿಯಲ್ಲಿ ದಾಖಲಾದ ಪ್ರಕರಣಕ್ಕೆ ಸಂಬಂಧಿಸಿದಂತೆ ಗೌರಿಬಿದನೂರು ಗ್ರಾಮಾಂತರ ಪೋಲಿಸ್ ಠಾಣಾ ಸರಹದ್ದು ಕೋನಾಪುರ ಗ್ರಾಮದ ರಸ್ತೆಯಲ್ಲಿ ಒಂಟಿ ಮಹಿಳೆಯ ಸರ ಕಿತ್ತುಕೊಂಡಿರುವ ಬಗ್ಗೆ ಒಪ್ಪಿಕೊಂಡಿರುತ್ತಾರೆ. ನಂತರ ದಿಃ 03.03.2024 ರಂದು ಗೌರಿಬಿದನೂರು ನಗರ ಠಾಣೆಯ ಮೊಕದ್ದಮೆ ಸಂಖ್ಯೆ 239/2022 ಭಾರತ ದಂಡ ಸಂಹಿತೆ ಕಲಂ 392 ರಡಿಯಲ್ಲಿ ದಾಖಲಾದ ಪ್ರಕರಣಕ್ಕೆ ಸಂಬಂಧಿಸಿದ ಕೃತ್ಯ ನಡೆದ ಸ್ಥಳಕ್ಕೆ ಆರೋಪಿತರನ್ನು ಮತ್ತು ಪಂಚರಾದ ಚಾಸಾ. 6 ಮತ್ತು 7

ರವರೊಂದಿಗೆ ಗೌರಿಬಿದನೂರು ನಗರದ ಬ್ಯಾಂಕ್ ಕಾಲೋನಿ ಬಳಿ ಕೃತ್ಯ ನಡೆದ ಸ್ಥಳದಲ್ಲಿ ಆರೋಪಿತರು ತೋರಿಸಿದ ಸ್ಥಳದ ಪಂಚನಾಮೆಯನ್ನು ಮಧ್ಯಾಹ್ನ 1 ರಿಂದ 2 ಗಂಟೆಯ ವರೆಗೆ ಸ್ಥಳ ಪಂಚನಾಮೆಯನ್ನು ಜರುಗಿಸಿರುತ್ತೇನೆ. ಅದನ್ನು ನೋಡುತ್ತಿದ್ದು ಈಗಾಗಲೇ ನಿಪಿ.11 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿ.11(ಸಿ) ಎಂದು ಗುರುತಿಸಲಾಯಿತು. ಅದೇ ದಿನ ಮತ್ತೊಂದು ಗೌರಿಬಿದನೂರು ನಗರ ಠಾಣೆಯ ಮೊಕದ್ದಮೆ ಸಂಖ್ಯೆ 45/2023 ಭಾರತ ದಂಡ ಸಂಹಿತೆ ಕಲಂ 392 ರಡಿಯಲ್ಲಿ ದಾಖಲಾದ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿತರು ತೋರಿಸಿದ ಸ್ಥಳವಾದ ಗೌರಿಬಿದನೂರು ನಗರದ ಮುನೇಶ್ವರ ಬಡವಾಣೆಯಲ್ಲಿರುವ ಎಸ್ ಬಿ ಐ ನಾಗಾಭೂಷಣ್ ರವರ ಮನೆಯ ಮುಂಭಾಗದಲ್ಲಿ ಮಧ್ಯಾಹ್ನ 2.30 ರಿಂದ 3.30 ಗಂಟೆಯ ವರೆಗೆ ಚಾಸಾ. 6 ಮತ್ತು 7 ರವರ ಸಮಕ್ಷಮ ಸ್ಥಳ ಪಂಚನಾಮೆಯನ್ನು ಜರುಗಿಸಿರುತ್ತೇನೆ. ಅದನ್ನು ನೋಡುತ್ತಿದ್ದು ಈಗಾಗಲೇ ನಿಪಿ.12 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿ.12(ಸಿ) ಎಂದು ಗುರುತಿಸಲಾಯಿತು.

10. ದಿಃ 01.03.2024 ರಂದು ಸಾಕ್ಷಿದಾರರಾದ ಚಾಸಾ. 3 ರಿಂದ 5 ಮತ್ತು 11 ರಿಂದ 14 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಚಾಸಾ.3 ರವರು ನನ್ನ ಮುಂದೆ ನಿಪಿ.3 ರಂತೆ ಚಾಸಾ. 5 ರವರು ನನ್ನ ಮುಂದೆ ನಿಪಿ.6 ರಂತೆ ಹಾಗೂ ಚಾಸಾ.4 ರವರು ನಿಪಿ.10 ರಂತೆ ಹೇಳಿಕೆಗಳನ್ನು ಕೊಟ್ಟಿರುತ್ತಾರೆ. ದಿಃ 03.03.2024 ರಂದು ಚಾಸಾ.6 ಮತ್ತು 7 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ . ಚಾಸಾ.6 ರವರು ನನ್ನ ಮುಂದೆ ನಿಪಿ.13 ರಂತೆ , ಚಾಸಾ.7 ರವರು ನನ್ನ ಮುಂದೆ ನಿಪಿ.14 ರಂತೆ ಹೇಳಿಕೆ ಕೊಟ್ಟಿರುತ್ತಾರೆ .

11. ನಂತರ ದಿಃ 04.03.2024 ರಂದು ಆರೋಪಿತರ ಸ್ವಇಚ್ಛಾ ಹೇಳಿಕೆಯ ಮೇರೇಗೆ 1 ಮತ್ತು 2 ನೇ ಆರೋಪಿತರ ಜೊತೆ ಗೌರಿಬಿದನೂರು ನಗರದ ಶ್ರೀ. ಮಹಾಲಕ್ಷ್ಮೀ ಜ್ಯುವೆಲರ್ಸ್ ಅಂಗಡಿಗೆ ಪಂಚರಾದ ಚಾಸಾ.8 ರಿಂದ 10 ರವರ ಜೊತೆ ಹೋಗಿದ್ದು ಮಹಾಲಕ್ಷ್ಮೀ ಜ್ಯುವೆಲರ್ಸ್ ಅಂಗಡಿಯ ಮಾಲೀಕರು 3 ಮಾಂಗಲ್ಯ ಸರಗಳನ್ನು

ಹಾಜರುಪಡಿಸಿದ್ದು ಅವುಗಳನ್ನು ಅಮಾನತ್ತು ಪಂಚನಾಮೆಯ ಮೂಲಕ ವಶಕ್ಕೆ ಪಡೆದುಕೊಂಡಿರುತ್ತೇನೆ. ಸದರಿ ಪಂಚನಾಮೆಯನ್ನು ಮ.1.30 ರಿಂದ 3.00 ಗಂಟೆಯವರೆಗೆ ಜರುಗಿಸಿರುತ್ತೇನೆ. ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ.7 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ.7 (ಸಿ) ಎಂದು ಗುರುತಿಸಲಾಯಿತು. ನಂತರ ವಾಪಸ್ಸು ಠಾಣೆಗೆ ಬಂದು ಅಮಾನತ್ತು ಪಡಿಸಿಕೊಂಡಂತಹ ಮೂರು ಮಾಂಗಲ್ಯ ಸರಗಳನ್ನು ಮಾಲು ಪಟ್ಟಿ ನಂ. 44/2024 ರಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ಕಳುಹಿಸಿರುತ್ತೇನೆ . ನಂತರ ಅದೇ ದಿನ ರಿಮ್ಯಾಂಡ್ ಅರ್ಜಿಯೊಂದಿಗೆ 1 ರಿಂದ 3 ನೇ ಆರೋಪಿತರನ್ನು ನ್ಯಾಯಾಲಯಕ್ಕೆ ಸಿಬ್ಬಂಧಿಗಳ ಮೂಲಕ ಹಾಜರುಪಡಿಸಿರುತ್ತೇನೆ .

12. ಚಾಸಾ.8 ಮತ್ತು 9 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ . ಚಾಸಾ.8 ರವರು ನನ್ನ ಮುಂದೆ ನಿಪಿ.8 ರಂತೆ , ಚಾಸಾ.9 ರವರು ನನ್ನ ಮುಂದೆ ನಿಪಿ.9 ರಂತೆ ಹೇಳಿಕೆಗಳನ್ನು ಕೊಟ್ಟಿರುತ್ತಾರೆ . ನಂತರ ಈ ಪ್ರಕರಣದಲ್ಲಿ ಪತ್ತೆ ಆಗದೇ ಇರುವಂತಹ 4 ಮತ್ತು 5 ನೇ ಆರೋಪಿತರನ್ನು ಪತ್ತೆ ಹಚ್ಚಲು ಪ್ರಾಮಾಣಿಕ ಪ್ರಯತ್ನ ಮಾಡಿದ್ದು ಅವರು ಪತ್ತೆ ಆಗದೇ ಇರುವುದರಿಂದ ಮತ್ತು ತನಿಖೆಯು ಮುಕ್ತಾಯವಾಗಿದ್ದರಿಂದ ಮತ್ತು 5 ಜನ ಆರೋಪಿಗಳ ವಿರುದ್ದ ಅಪರಾಧ ಎಸಗಿರುತ್ತಾರೆ ಎಂದು ಸಾಕಷ್ಟು ಸಾಕ್ಷ್ಯಾಧಾರಗಳು ದೊರೆತಿದ್ದರಿಂದ ಆರೋಪಿತರ ವಿರುದ್ದ ನ್ಯಾಯಾಲಯಕ್ಕೆ ದೋ. ಪಟ್ಟಿಯನ್ನು ಸಲ್ಲಿಸಿರುತ್ತೇನೆ.

**<u>ಪಾಟೀ ಸವಾಲುಃ 1 ಮತ್ತು 2 ನೇ ಆರೋಪಿ ಪರ ಶ್ರೀ .ಹೆಚ್.ಎನ್. ಎಂ ವಕೀಲರಿಂದಃ</u>**

13. ಫೋನ್ ಮುಖಾಂತರ ಕೃತ್ಯ ನಡೆದ ಸ್ಥಳದಿಂದ ದೂರು ನೀಡಿದರು ನಾವು ಪ್ರಕರಣವನ್ನು ದಾಖಲಿಸಿಕೊಳ್ಳುವುದಿಲ್ಲ ಆದರೆ ಠಾಣೆಗೆ ಹಾಜರಾಗಿ ಹೇಳಿಕೆ ನೀಡಬೇಕಕು ಎಂದು ಸ್ವತಃ ಹೇಳುತ್ತಾರೆ . ನಿಪಿ.1 ದೂರಿನಲ್ಲಿ ಆರೋಪಿತರ ಹೆಸರುಗಳು ಮತ್ತು ವಿಳಾಸ ನಮೂದಾಗಿರುವುದಿಲ್ಲ ಎಂದರೆ ನಿಜ . ಪ್ರ.ವ.ವರದಿಯಲ್ಲಿಯೂ ಸಹಾ ಗೊತ್ತಿಲ್ಲದ ವ್ಯಕ್ತಿಗಳು ಎಂದು ತೋರಿಸಿರುತ್ತೇನೆ ಎಂದರೆ ನಿಜ . ಠಾಣೆಯಿಂದ ಕೃತ್ಯ ನಡೆದ ಸ್ಥಳ ಸುಮಾರು 2 ವರೆ

ಕಿ.ಮೀಟರ್ ದೂರ ಇರುತ್ತದೆ . ಚಾಸಾ.1 ರವರು ದೂರು ಕೊಟ್ಟ ನಂತರ ನಮ್ಮ ಜೊತೆ ಸ್ಥಳಕ್ಕೆ ಬಂದಿರುವುದಿಲ್ಲ ಆದರೆ ಡ್ರೈವರ್ ಬಂದಿರುತ್ತಾನೆ ಎಂದು ಸ್ವತಃ ಹೇಳುತ್ತಾರೆ . ಎಫ್ ಐ ಆರ್ ದಾಖಲಿಸಿದ ನಂತರ ಸುಮಾರು 15 ನಿಮಿಷದಲ್ಲಿ ಸ್ಥಳಕ್ಕೆ ಹೋಗಿದ್ದೆನು. ನಾನು ಕೇಸನ್ನು ದಾಖಲಿಸಿಕೊಳ್ಳುವ ಕಾಲಕ್ಕೆ ಚಾಸಾ.2 ಮತ್ತು 3 ರವರು ಠಾಣೆಯಲ್ಲಿ ಇರಲಿಲ್ಲ ಆದರೆ ಎಫ್ ಐ ಆರ್ ಆದ ನಂತರ ಕರೆಯಿಸಿಕೊಂಡಿರುತ್ತೇನೆ . ಚಾಸಾ.2 ಮತ್ತು 3 ರವರು ನಮ್ಮ ಠಾಣೆಗೆ ಸುಮಾರು 10 ನಿಮಿಷದಲ್ಲಿ ಬಂದಿರುತ್ತಾರೆ . ಚಾಸಾ.2 ಮತ್ತು 3 ರವರು ನಮ್ಮ ಠಾಣೆಯ ಅಕ್ಕಪಕ್ಕದವರಲ್ಲ ಎಂದರೆ ನಿಜ ಆದರೆ ಠಾಣೆಯ ಹಿಂಭಾಗದಲ್ಲಿ ಇರುತ್ತಾರೆ . ಚಾಸಾ.2 ಮತ್ತು 3 ರವರು ಠಾಣೆಯಿಂದ ಸುಮಾರು 2 ಕಿ.ಮೀಟರ್ ದೂರದಲ್ಲಿ ವಾಸ ಇರುತ್ತಾರೆ ಎಂದರೆ ಸರಿಯಲ್ಲ .

14. ಚಾಸಾ.2 ಮತ್ತು 3 ರವರು ನಾವು ಅವರನ್ನು ಕರೆಯಿಸಿದ ಸಮಯದಲ್ಲಿ ಠಾಣೆಯ ಸರ್ಕಲ್ ನ ಬಳಿ ಇದ್ದರು. ಚಾಸಾ.2 ಮತ್ತು 3 ರವರು ಠಾಣೆಯ ಸರ್ಕಲ್ ನಲ್ಲಿ ಇದ್ದರು ಎಂದು ಮಹಜರ್ ನಲ್ಲಿ ಕಾಣಿಸಿರಲಿಲ್ಲ. ನಾವು ಘಟನಾ ಸ್ಥಳಕ್ಕೆ ಹೋದಾಗ ಬೆಳಗಿನ ಜಾವ 2.10 ಗಂಟೆ ಸಮಯವಾಗಿತ್ತು. ನಾನು ಸ್ಥಳಕ್ಕೆ ಹೋದಾಗ ನಮ್ಮ ಠಾಣೆಯ ಪೊಲೀಸರು ಆರೋಪಿತರನ್ನು ಆಗಲೇ ಹಿಡಿದುದಿಟ್ಟುಕೊಂಡಿದ್ದರು . ರಸ್ತೆಯಿಂದ ಸುಮಾರು 3 ಮೀಟರ್ ದೂರದಲ್ಲಿ ಆರೋಪಿತರು ಇದ್ದ ಸ್ಥಳ ಇರುತ್ತದೆ . ಆರೋಪಿತರು ಸಿಕ್ಕ ಸ್ಥಳದಲ್ಲಿ ಸ್ಥಳೀಕರು ಯಾರು ಇರಲಿಲ್ಲ . ನಾನು ಭೇಟಿ ನೀಡಿದ ಸ್ಥಳ ಕತ್ತಲಿನಿಂದ ಕೂಡಿತ್ತು ಎಂದರೆ ನಿಜ . ಸದರಿ ಸ್ಥಳದಿಂದ 100 ಮೀಟರ್ ದೂರದಲ್ಲಿ ವಾಹನಗಳು ಹೋದಾಗ ಕಾಣಿಸುತ್ತವೆ ಎಂದರೆ ನಿಜ . ಕೃತ್ಯ ನಡೆದ ಸ್ಥಳ ಮಣ್ಣಿನ ರಸ್ತೆ ಇರುತ್ತದೆ .

15. 1 ಮತ್ತು 2 ನೇ ಆರೋಪಿತರ ಸ್ವಇಚ್ಛಾ ಹೇಳಿಕೆಗಳನ್ನು ಯಾವ ದಿನಾಂಕದಂದು ಮತ್ತು ಯಾವ ಸಮಯದಿಂದ ಯಾವ ಸಮಯದವರೆಗೆ ಪಡೆದುಕೊಂಡಿರುತ್ತೇನೆ ಎಂದು ನಮೂದಾಗಿರುವುದಿಲ್ಲ ಎಂದರೆ ನಿಜ. ನಾನು ಅಮಾನತ್ತು ಪಡಿಸಿಕೊಂಡಂತಹ ದ್ವಿಚಕ್ರವಾಹನದ ದಾಖಲಾತಿಗಳನ್ನು ಪಡೆದುಕೊಂಡಿರುತ್ತೇನೆ ಅದು 1 ನೇ ಆರೋಪಿಯ

ತಂದೆಯ ಹೆಸರಿನಲ್ಲಿ ಇರುತ್ತದೆ. ದಾಖಲೆಗಳನ್ನು ಪಡೆದುಕೊಂಡಿರುತ್ತೇನೆ ಆದರೆ ಹಾಜರುಪಡಿಸಿರುವುದಿಲ್ಲ . ಸದರಿ ದಾಖಲೆಗಳನ್ನು ಈ ಪ್ರಕರಣದಲ್ಲಿ ಕೊಡಲು ತೊಂದರೆ ಇರಲಿಲ್ಲ . ಚಾಸಾ.4 ಮತ್ತು 5 ರವರು ದ್ವಿಚಕ್ರವಾಹನ ಅಮಾನತ್ತುಪಡಿಸಿಕೊಂಡಂತಹ ವಿನಾಯಕ ನಗರದ ಸ್ಥಳೀಕರು ಅಲ್ಲ ಎಂದರೆ ನಿಜ . ವಿನಾಯಕ ನಗರದ ರಾಜು ರವರ ಮನೆಯ ಅಕ್ಕಪಕ್ಕ ಸಾಕಷ್ಟು ವಾಸದ ಮನೆಗಳು ಇರುತ್ತವೆ ಎಂದರೆ ನಿಜ . ಸದರಿ ರಾಜುರವರ ಮನೆಯ ಅಕ್ಕಪಕ್ಕದವರನ್ನು ಕರೆದು ವಿಚಾರಣೆ ಮಾಡಿ ಅವರನ್ನು ಪಂಚರನ್ನಾಗಿ ಮಾಡಲು ಪ್ರಯತ್ನ ಪಟ್ಟಿರುವುದಿಲ್ಲ ಎಂದರೆ ನಿಜ ಆದರೆ ಅವರ ಅವಶ್ಯಕತೆ ಇರುವುದಿಲ್ಲ . ದ್ವಿಚಕ್ರವಾಹನದ ಕೀ 1 ನೇ ಆರೋಪಿಯ ಬಳಿ ಇತ್ತು . ಸದರಿ 1 ನೇ ಆರೋಪಿಯ ಬಳಿ ದ್ವಿಚಕ್ರ ವಾಹನದ ಕೀ ಇದ್ದ ಬಗ್ಗೆ ಮಹಜರ್ ನಲ್ಲಿ ಹೇಳಿರುವುದಿಲ್ಲ .

16. ದಿಃ03.03.2024 ರಂದು ಗೌರಿಬಿದನೂರಿನ 14 ನೇ ವಾರ್ಡ್ ನಲ್ಲಿ ಬ್ಯಾಂಕ್ ಕಾಲೋನಿನಲ್ಲಿ ಮಾಡಿದ ಪಂಚನಾಮೆಯ ಪಂಚರಾದ ಚಾಸಾ.6 ಮತ್ತು 7 ರವರಾದ ಅಲ್ಲಿನ ಸ್ಥಳೀಕರು ಅಲ್ಲ ಎಂದರೆ ನಿಜ . ಸದರಿ ಬ್ಯಾಂಕ್ ಕಾಲೋನಿಯ ಅಕ್ಕಪಕ್ಕ ಅಂಗಡಿಗಳು ಮತ್ತು ಮನೆಗಳು ಇರುತ್ತವೆ . ಸದರಿ ಅಂಗಡಿ ಮತ್ತು ಮನೆಗಳ ನಿವಾಸಿಗಳನ್ನು ಪಂಚನಾಮೆಗೆ ಬರಮಾಡಿಕೊಳ್ಳಲು ತೊಂದರೆ ಇರಲಿಲ್ಲ ಎಂದರೆ ನಿಜ .

17. ದಿಃ03.03.2024 ರಂದು ಗೌರಿಬಿದನೂರಿನ ವಿಘ್ನೇಶ್ವರ ಬಡಾವಣೆಯಲ್ಲಿ ಮಾಡಿದ ಪಂಚನಾಮೆಯ ಪಂಚರಾದ ಚಾಸಾ.6 ಮತ್ತು 7 ರವರಾದ ಅಲ್ಲಿನ ಸ್ಥಳೀಕರು ಅಲ್ಲ ಎಂದರೆ ನಿಜ . ಸದರಿ ವಿಘ್ನೇಶ್ವರ ಬಡಾವಣೆಯ ಅಕ್ಕಪಕ್ಕ ಅಂಗಡಿಗಳು ಮತ್ತು ಮನೆಗಳು ಇರುತ್ತವೆ . ಸದರಿ ಅಂಗಡಿ ಮತ್ತು ಮನೆಗಳ ನಿವಾಸಿಗಳನ್ನು ಪಂಚನಾಮೆಗೆ ಬರಮಾಡಿಕೊಳ್ಳಲು ತೊಂದರೆ ಇರಲಿಲ್ಲ ಎಂದರೆ ನಿಜ . ಎಸ್ ಬಿ ಐ ನಾಗಭಾಷಣ ರವರ ಮನೆಯವರನ್ನು ಕರೆದು ವಿಚಾರಣೆ ಮಾಡಿ ಹೇಳಿಕೆ ತೆಗೆದುಕೊಂಡಿರುವುದಿಲ್ಲ .

18. ದಿಃ04.03.2024 ರಂದು ಗೌರಿಬಿದನೂರಿನ ಮಹಾಲಕ್ಷ್ಮೀ ಜ್ಯುವೆಲರ್ಸ್ ಅಂಗಡಿಯಲ್ಲಿ ಮಾಡಿದ ಅಮಾನತ್ತು ಪಂಚನಾಮೆಯ ಪಂಚರಾದ ಚಾಸಾ.8 ಮತ್ತು 9 ರವರಾದ ಅಲ್ಲಿನ ಸ್ಥಳೀಕರು ಅಲ್ಲ ಎಂದರೆ ನಿಜ . ಸದರಿ ಮಹಾಲಕ್ಷ್ಮೀ ಜ್ಯುವೆಲರ್ಸ್ ಅಂಗಡಿಯ ಅಕ್ಕಪಕ್ಕ ಅಂಗಡಿಗಳು ಮತ್ತು ಮನೆಗಳು ಇರುತ್ತವೆ . ಸದರಿ ಅಂಗಡಿಯಲ್ಲಿ ಇಬ್ಬರು ಜನರು ಕೆಲಸ ಮಾಡುತ್ತಿದ್ದರು . ಸದರಿ ಅಂಗಡಿಯ ಮಾಲೀಕರನ್ನಾಗಲೀ ಅಥವಾ ಅದರಲ್ಲಿ ಕೆಲಸ ಮಾಡುವ ಜನರ ಹೇಳಿಕೆಗಳನ್ನು ಪಡೆದುಕೊಂಡಿರುವುದಿಲ್ಲ ಮತ್ತು ಪಂಚನಾಮೆಗೆ ಅವರ ಸಹಿಗಳನ್ನು ಪಡೆದುಕೊಂಡಿರುವುದಿಲ್ಲ . ಚಾಸಾ.11 ಮತ್ತು 12 ರವರ ಹೇಳಿಕೆಗಳನ್ನು ದಿಃ01.03.2024 ರಂದು ದಾಖಲಿಸಿರುತ್ತೇನೆ . ಸದರಿ ಚಾಸಾ.11 ಮತ್ತು 12 ರವರ ಹೇಳಿಕೆಗಳನ್ನು ದಿಃ01.03.2024 ರಂದು ತೆಗೆದುಕೊಂಡಿರುತ್ತೇನೆ ಎಂದರೆ ನಿಜ . ಚಾಸಾ.11 ರವರ ಹೇಳಿಕೆಯಲ್ಲಿ " ದಿಃ04.03.2024 ರಂದು 01.30 ಗಂಟೆದಯಲ್ಲಿ ಆರೋಪಿ 1 ಮತ್ತು 2 ರವರು ವಿವಿಧ ಪ್ರಕರಣಗಳಲ್ಲಿ ಸುಲುಗೆ ಮಾಡಿಕೊಂಡು ಬಂದು ಮಾರಾಟ ಮಾಡಿದ್ದ ನಗರದ ಬಜಾರ್ ರಸ್ತೆಯಲ್ಲಿರುವ ಮಹಾಲಕ್ಷ್ಮೀ ಜ್ಯುವೆಲರ್ಸ್ ಬಳಿ ಅಮಾನತ್ತುಪಡಿಸಿಕೊಳ್ಳಲು ಹೋಗಿದ್ದಾಗ ಆರೋಪಿತಗೆ ಬೆಂಗಾವಲು ಕರ್ತವ್ಯವನ್ನು ನಿರ್ವಹಿಸಿರುತ್ತೇನೆ. ಪಂಚನಾಮೆಯ ಸಮಯದಲ್ಲಿ ಅಮಾನತ್ತುಪಡಿಸಿಕೊಂಡ ಮಾಲುಗಳನ್ನು ಮತ್ತು 3 ಜನ ಆರೋಪಿತರನ್ನು ನೋಡಿದ್ದು ಪುನಃ ನೋಡಿದರೆ ಗುರುತಿಸುತ್ತೇನೆ " ಎಂದು ಹೇಳಿಕೆಯನ್ನು ಕೊಟ್ಟಿರುತ್ತಾರೆ ಎಂದರೆ ನಿಜ . ಸದರಿ ಭಾಗವನ್ನು **ನಿಡಿ.1** ಎಂದು ಗುರುತಿಸಲಾಯಿತು.

19. ಚಾಸಾ.12 ರವರ ಹೇಳಿಕೆಯಲ್ಲಿ " ದಿಃ04.03.2024 ರಂದು 01.30 ಗಂಟೆದಯಲ್ಲಿ ಆರೋಪಿ 1 ಮತ್ತು 2 ರವರು ವಿವಿಧ ಪ್ರಕರಣಗಳಲ್ಲಿ ಸುಲುಗೆ ಮಾಡಿಕೊಂಡು ಬಂದು ಮಾರಾಟ ಮಾಡಿದ್ದ ನಗರದ ಬಜಾರ್ ರಸ್ತೆಯಲ್ಲಿರುವ ಮಹಾಲಕ್ಷ್ಮೀ ಜ್ಯುವೆಲರ್ಸ್ ಬಳಿ ಅಮಾನತ್ತುಪಡಿಸಿಕೊಳ್ಳಲು ಹೋಗಿದ್ದಾಗ ಆರೋಪಿತಗೆ ಬೆಂಗಾವಲು ಕರ್ತವ್ಯವನ್ನು ನಿರ್ವಹಿಸಿರುತ್ತೇನೆ. ಪಂಚನಾಮೆಯ ಸಮಯದಲ್ಲಿ ಅಮಾನತ್ತುಪಡಿಸಿಕೊಂಡ ಮಾಲುಗಳನ್ನು ಮತ್ತು 3 ಜನ ಆರೋಪಿತರನ್ನು ನೋಡಿದ್ದು

ಪುನಃ ನೋಡಿದರೆ ಗುರುತಿಸುತ್ತೇನೆ " ಎಂದು ಹೇಳಿಕೆಯನ್ನು ಕೊಟ್ಟಿರುತ್ತಾರೆ ಎಂದರೆ ನಿಜ. ಸದರಿ ಭಾಗವನ್ನು **ನಿಡಿ.2** ಎಂದು ಗುರುತಿಸಲಾಯಿತು.

20. ಚಾಸಾ.11 ಮತ್ತು 12 ರವರು ತನ್ನ ಹೇಳಿಕೆಗಳಲ್ಲಿ ನಾನು ಸ್ಥಳಕ್ಕೆ ಹೋಗುವಷ್ಟರಲ್ಲಿ ಅವರುಗಳು ಆರೋಪಿತರನ್ನು ಹಿಡಿದಿಟ್ಟುಕೊಂಡಿದ್ದರು ಎಂದು ಹೇಳಿರುವುದಿಲ್ಲ ಆದರೆ ವಾಚ್ ಮಾಡುತ್ತಿದ್ದರು ಎಂದು ಹೇಳಿಕೆಯಲ್ಲಿ ಹೇಳಿರುತ್ತಾರೆ . 1 ಮತ್ತು 2 ನೇ ಆರೋಪಿತರ ವಿರುದ್ಧ ಗೌರಿಬಿದನೂರು ನಗರ ಪೊ.ಠಾಣೆಯ ಕ್ರೈಂ. ನಂ. 239/2022 ಮತ್ತು 45/2023 ರಲ್ಲಿ ಪ್ರಕರಣ ದಾಖಲಾದ ಬಗ್ಗೆ ದಾಖಲಾತಿಗಳನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿರುವುದಿಲ್ಲ . ದಿಃ01.03.2024 ರಂದು ಯಾವುದೇ ಘಟನೆ ನಡೆಯದೇ ಇದ್ದರೂ ನಾನು ನಮ್ಮ ಮೇಲಾಧಿಕಾರ ಮಾತು ಕೇಳಿ ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ . ನಾನು ಯಾವುದೇ ಸ್ಥಳಕ್ಕೆ ಹೋಗಿರುವುದಿಲ್ಲ ಮತ್ತು ಅಮಾನತ್ತು ಪಂಚನಾಮೆಯನ್ನು ಸ್ಥಳದಲ್ಲಿ ಜರುಗಿಸಿರುವುದಿಲ್ಲ ಮತ್ತು ಗೌರಿಬಿದನೂರು ನಗರದ ಮುನೇಶ್ವರ ಬಡಾವಣೆ ಮತ್ತು ಬ್ಯಾಂಕ್ ಕಾಲೋನಿ ಮತ್ತು ವಿನಾಯಕ ನಗರ ಗಳಿಗೆ ಹೋಗಿರುವುದಿಲ್ಲ ಅಲ್ಲಿ ಯಾವುದೇ ಪಂಚನಾಮೆಗಳನ್ನು ಮಾಡಿರುವುದಿಲ್ಲ ಮತ್ತು ಮಾಂಗಲ್ಯ ಸರಗಳನ್ನು ಜಪ್ತುಪಡಿಸಿಕೊಂಡಿರುವುದಿಲ್ಲ , ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ನಾನು ಸದರಿ ಸ್ಥಳಗಳಿಗೆ ಹೋಗದೇ ಇರುವುದರಿಂದ ಅಲ್ಲಿನ ಸ್ಥಳೀಕರ ಹೇಳಿಕೆಗಳನ್ನು ಪಡೆದುಕೊಂಡಿರುವುದಿಲ್ಲ ಮತ್ತು ಪಂಚನಾಮೆಗಳಿಗೆ ಸಹಿ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ .

21. 1 ಮತ್ತು 2 ನೇ ಆರೋಪಿತರು ನನ್ನ ಮುಂದೆ ಸ್ವಚ್ಛಾ ಹೇಳಿಕೆಯನ್ನು ನೀಡಿರುವುದಿಲ್ಲ ಆ ಕಾರಣಕ್ಕಾಗಿ ಅದರಲ್ಲಿ ದಿನಾಂಕ ಮತ್ತು ಸಮಯ ನಮೂದು ಮಾಡಿರುವುದಿಲ್ಲ ಅವುಗಳನ್ನು ಠಾಣೆಯಲ್ಲಿ ಸೃಷ್ಟಿಮಾಡಿದ್ದು ಆರೋಪಿತರಿಗೆ ಬೆದರಿಕೆ ಹಾಕಿ ಬಿಳಿ ಹಾಳೆಗಳ ಮೇಲೆ ಸಹಿಗಳನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ . ಅದೇ ರೀತಿ ದ್ವಿಚಕ್ರ ವಾಹನ ಈ ಪ್ರಕರಣಕ್ಕೆ ಸಂಬಂಧಿಸದೇ ಇಲ್ಲದಿದ್ದರೂ ಸಹಾ ಈ ಪ್ರಕರಣಕ್ಕೆ

ವಾಹನವನ್ನು ಸಿಲುಕಿಸಿದ್ದೀರಾ ಎಂದರೆ ಸರಿಯಲ್ಲ . ಪಂಚರನ್ನು ಠಾಣೆಗೆ ಕರೆಯಿಸಿ ಅಲ್ಲಿ ಅವರುಗಳ ಸಹಿ ತೆಗೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ . 1 ರಿಂದ 3 ನೇ ಆರೋಪಿತರು ಈ ಪ್ರಕರಣಕ್ಕೆ ಯಾವುದೇ ರೀತಿಯ ಸಂಬಂಧ ಇಲ್ಲದೇ ಇದ್ದರೂ ಸಹಾ ಅವರ ವಿರುದ್ಧ ಸುಳ್ಳು ಕೇಸು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ .

**<u>ಪಾಟೀ ಸವಾಲು ಃ 3 ನೇ ಆರೋಪಿಯ ಪರ ಶ್ರೀ. ಹೆಚ್.ಆರ್. ವಿ ವಕೀಲರಿಂದ</u>**

22. ಚಾಸಾ.1 ರವರಿಗೆ ದಾಳಿ ಮಾಡಿ ಆರೋಪಿತರನ್ನು ವಶಕ್ಕೆ ಪಡೆದುಕೊಂಡು ದೂರು ಕೊಡಲು ತೊಂದರೆ ಏನು ಇತ್ತು ಎಂದು ವಿಚಾರಣೆ ಮಾಡಿರುವುದಿಲ್ಲ . ಆರೋಪಿತರು ಜಾಲೀ ಮುಳ್ಳಿನ ಗಿಡದ ಪೊದೆಯಲ್ಲಿ ಕುಳಿತಿದ್ದರು . ಸದರಿ ಪೊದೆ ಇರುವ ಸ್ಥಳದಿಂದ ರಸ್ತೆಯಲ್ಲಿ ಯಾವುದೇ ವಾಹನಗಳು ಓಡಾಡಿದರೆ ಕಾಣಿಸುತ್ತವೆ ಎಂದರೆ ನಿಜ . ಆರೋಪಿತರು ರಸ್ತೆಯಲ್ಲಿ ವಾಹನಗಳನ್ನು ತಡೆಗಟ್ಟಿರುವುದು ಕಂಡುಬಂದಿರುವುದಿಲ್ಲ ಆದರೆ ತಡೆಗಟ್ಟಲು ಹೊಂಚುಹಾಕುತ್ತಿರುವುದು ಕಂಡುಬಂದಿರುತ್ತದೆ. ಚಾಸಾ.1 ರವರಿಂದ ಆರೋಪಿತರನ್ನು ಗುರುತಿಸಲು ಕೇಳಿರುತ್ತೇನೆ. ಚಾಸಾ.1 ರವರು ಆರೋಪಿತರನ್ನು ಗುರುತಿಸಿದ ಬಗ್ಗೆ ದೋ.ಪಟ್ಟಿಯಲ್ಲಿ ಹೇಳಿರುವುದಿಲ್ಲ . ನಾವು ಈ ಪ್ರಕರಣದಲ್ಲಿ ಆರೋಪಿತರನ್ನು ಹಿಡಿದಿರುವುದಿಲ್ಲ ಮತ್ತು ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ, ಆ ಕಾರಣಕ್ಕಾಗಿ ನಾವು ಫೋಟೋಗಳನ್ನಾಗಲೀ, ವಿಡಿಯೋವನ್ನಾಗಲೀ ತೆಗೆದಿರುವುದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿನ ಪಂಚನಾಮೆಗಳನ್ನು ಮತ್ತು ಮುಮಾ.ಗಳನ್ನು ಆರೋಪಿತರ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿ ಸುಳ್ಳು ದೋ.ಪಟ್ಟಿಯನ್ನು ಸಲ್ಲಿಸದೇ ಠಾಣೆಯಲ್ಲೆ ತಯಾರಿಸಿರುತ್ತೇವೆ ಎಂದರೆ ಸರಿಯಲ್ಲ . ಆರೋಪಿಯನ್ನು ನಾನು ಮನೆಯಿಂದ ಕರೆದುಕೊಂಡು ಬಂದಿರುತ್ತೇನೆ ಎಂದರೆ ಸರಿಯಲ್ಲ . ನಾನು ಯಾವುದೇ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ .3 ನೇ ಆರೋಪಿಯು ತನ್ನ ಸ್ವಇಚ್ಛಾ ಹೇಳಿಕೆಗಳಿಗೆ ಸಹಿ ಮಾಡಿರುತ್ತಾನೆ ಎಂದು ಹಾಗೂ ತಪ್ಪನ್ನು ಒಪ್ಪಿಕೊಂಡಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ

ಸರಿಯಲ್ಲ . 3 ನೇ ಆರೋಪಿಗೆ ಬೆದರಿಕೆ ಹಾಕಿ ಸಹಿ ಪಡೆದುಕೊಂಡಿರುತ್ತೇನೆ ಮತ್ತು ಸ್ವಇಚ್ಛಾ ಹೇಳಿಕೆಗಳನ್ನು ಸೃಷ್ಟಿಮಾಡಿರುತ್ತೇನೆ ಎಂದರೆ ಸರಿಯಲ್ಲ .

**ಮರುವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ದಿನಾಂಕ 23.07.2026 ರಂದು ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು )**

ಓದಿ ಹೇಳಿ ಕೇಳಿ ಸರಿ ಇದೆ

sd/-

**(ಸಿದ್ದಣ್ಣ.ಬಿ.ಹಂದ್ರಾಳ)**

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಚಿಕ್ಕಬಳ್ಳಾಪುರ.